

ಅಪ್ರತಿಮ ಚೆಲುವಿನ ಪೆರಿಟೊ ಮೊರಿನೊ ಗ್ಲೇಸಿಯರ್

## ಪೆರಿಟೊ ಮೊರಿನೊ ಗ್ಲೇಸಿಯರ್

# ನಿಸರ್ಗದ ಚೆಲುವಿಗೆ ನೀರ್ಗಲ್ಲಿನ ಕನ್ನಡಿ

**ಅರ್ಜೆಂಟೀನಾದ 'ಪೆರಿಟೊ ಮೊರಿನೊ ಗ್ಲೇಸಿಯರ್' ವಿಶ್ವದ ಬಹು ಸುಂದರ ಭೂದೃಶ್ಯಗಳಲ್ಲೊಂದು. ನೀರ್ಗಲ್ಲಿನ ಬೃಹತ್ ಮೈದಾನ, ಪ್ರಕೃತಿಯ ಅನುಪಮ ಚೆಲುವನ್ನೂ, ಜೀವವೈವಿಧ್ಯ ಸಮೃದ್ಧಿಯನ್ನೂ ಒಟ್ಟಿಗೆ ಕಾಣಿಸುವಂತಿದೆ.**

■ **ಡಿ.ಜಿ. ಮಲ್ಲಿಕಾರ್ಜುನ**

ಪ್ರಪಂಚದ ಮೂರನೇ ಅತಿದೊಡ್ಡ ಸಿಹಿ ನೀರಿನ ಸಂಗ್ರಹ, 30 ಕಿ.ಮೀ. ಉದ್ದ, 250 ಚ.ಕಿ.ಮೀ. ವ್ಯಾಪ್ತಿಯ ನೀರ್ಗಲ್ಲಿನ ಮೈದಾನವನ್ನು ಒಂದು ಚಿತ್ರ, ಕಣ್ಣೋಟ ಅಥವಾ ಮಾತುಗಳಲ್ಲಿ ವಿವರಿಸುವುದು ಅಸಾಧ್ಯ. ಅದುವೇ 'ಪೆರಿಟೊ ಮೊರಿನೊ ಗ್ಲೇಸಿಯರ್'.

ಮಿಲಿಯಾಂತರ ವರ್ಷಗಳ ಹಿಂದೆ ಅತಿ ಶೀತದಿಂದ ಘನಗೊಂಡು ಕಲ್ಲಿನಂತಾಗಿ, ಭೂಗುರುತ್ವದಿಂದ ಕುಸಿದು, ಬೃಹದಾಕಾರಕ್ಕೆ ಬೆಳೆದ ನೀರ್ಗಲ್ಲ ಬೆಟ್ಟರೂಪಿಗಳೇ ಗ್ಲೇಸಿಯರ್‌ಗಳು.

ಅರ್ಜೆಂಟೀನಾ ದೇಶದ ದಕ್ಷಿಣದಲ್ಲಿ, ಆಂಡಿಸ್ ಪರ್ವತ ಶ್ರೇಣಿಯ ಪೂರ್ವ ದಿಕ್ಕಿನಲ್ಲಿ, ಸುಮಾರು 750,000 ಹೆಕ್ಟೇರ್ ಪ್ರದೇಶದಲ್ಲಿ ಹರಡಿಕೊಂಡಿದೆ 'ಲಾಸ್ ಗ್ಲೇಸಿಯರ್ಸ್ ನ್ಯಾಷನಲ್ ಪಾರ್ಕ್'. ನಿಧಾನವಾಗಿ ಚಲಿಸುವ ಮಂಜುಗಡ್ಡೆಗಳಿಂದ ನದಿಗಳು, ವಿಶಾಲ ಸರೋವರಗಳು ಮತ್ತು ಕಾಡು ಸೃಷ್ಟಿಯಾಗಿವೆ. ವಿಶ್ವ ಪಾರಂಪರಿಕ ತಾಣವೆಂದು ಗುರುತಿಸಲಾಗಿರುವ ಈ ರಾಷ್ಟ್ರೀಯ ಉದ್ಯಾನವು 'ಪೆರಿಟೊ ಮೊರಿನೊ' ಎಂಬ ಬೃಹತ್ ಗ್ಲೇಸಿಯರ್ (ನೀರ್ಗಲ್ಲು) ಕಾರಣದಿಂದಾಗಿ ಪ್ರಸಿದ್ಧವಾಗಿದೆ. ಸಾವಿರಾರು ಪ್ರವಾಸಿಗರು ಈ ಗ್ಲೇಸಿಯರ್ ವೀಕ್ಷಣೆಗೆ ಬರುತ್ತಾರೆ. ಹಲವಾರು ವಿಜ್ಞಾನಿಗಳು ಗ್ಲೇಸಿಯರ್ ಮತ್ತು ಹವಾಮಾನ ಸಂಬಂಧಿಸಿದ ಸಂಶೋಧನೆಗಾಗಿ ಇಲ್ಲಿ ಬೀಡುಬಿಟ್ಟಿರುತ್ತಾರೆ.

### ಏನಿದು ಪೆರಿಟೊ ಮೊರಿನೊ?

ಫ್ರಾನ್ಸಿಸ್ಕೊ ಪಾಸ್ಕಾಸಿಯೊ ಮೊರಿನೊ, ಅರ್ಜೆಂಟೀನಾದ ಪ್ರಸಿದ್ಧ ಸಂಶೋಧಕ ಮತ್ತು ಶೈಕ್ಷಣಿಕ ತಜ್ಞ. ಅವರನ್ನು ಸ್ಥಳೀಯರು ಪೆರಿಟೊ ಮೊರಿನೊ ಎಂದೇ ಕರೆಯುತ್ತಿದ್ದರು. ಪೆರಿಟೊ ಎಂದರೆ ತಜ್ಞ ಎಂದು. ಪ್ಯಾಟಗೋನಿಯಾ ಪ್ರಾಂತ್ಯವನ್ನು ಅರ್ಜೆಂಟೀನಾದೊಳಗೆ ವಿಲೀನಗೊಳಿಸಲು ಮತ್ತು ಅಭಿವೃದ್ಧಿಗಾಗಿ ಶ್ರಮಿಸಿದ ಪ್ರಭಾವಿ ವ್ಯಕ್ತಿ ಇವರು. ಅರ್ಜೆಂಟೀನಾ ಮತ್ತು ಚಿಲಿಯ ಗಡಿಗಳನ್ನು ಗುರುತಿಸಿಕೊಂಡ ಮೇಲೆ ಅರ್ಜೆಂಟೀನಾ ಭಾಗಕ್ಕೆ ಸೇರಿದ ಬೃಹತ್ ಗ್ಲೇಸಿಯರ್‌ಗೆ ಫ್ರಾನ್ಸಿಸ್ಕೊ ಮೊರಿನೊ ಅವರ ಗೌರವಾರ್ಥವಾಗಿ 'ಪೆರಿಟೊ ಮೊರಿನೊ' ಎಂದು ಹೆಸರಿಡಲಾಯಿತು.

ನೀರನ್ನು ಅತಿ ಶೀತಕ್ಕೊಳಪಡಿಸಿ ಘನೀಕರಿಸಿದ ಐಸ್‌ಗಿಂತ, ನಿಸರ್ಗದಲ್ಲಿ ಸಹಜವಾಗಿ ಘನಗೊಂಡು ಕಲ್ಲಿನಂತಾಗಿರುವ ನೀರ್ಗಲ್ಲು ಬಹಳ ಸಾಂದ್ರತೆಯಿಂದ, ಅಧಿಕ ಶಕ್ತಿ ಮತ್ತು ಒತ್ತಡವನ್ನು ಹೊಂದಿರುತ್ತದೆ.

ದೋಣಿಯಲ್ಲಿ ಕುಳಿತು ಪೆರಿಟೊ ಮೊರಿನೊ ಗ್ಲೇಸಿಯರ್ ಅನ್ನು ಹತ್ತಿರದಿಂದ ಕಾಣುವುದು ಅವಿಸ್ಮರಣೀಯ ಅನುಭವ. ತೇಲುವ ಐಸ್‌ಬರ್ಗ್‌ಗಳು, ವಿವಿಧ ನೀಲಿ ಬಣ್ಣಗಳಲ್ಲಿ